ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1903 (1689)
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	23.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ವಿದ್ಯುತ್ ಚಾಲಿತ ವಾಹನಗಳ ತಯಾರಿಕಾ ಉದ್ಯಮಕ್ಕೆ ಸರ್ಕಾರ ಪ್ರೋತ್ಸಾಹ ನೀಡಲು ಕೈಗೊಂಡ ಕ್ರಮಗಳೇನು;	ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಮತ್ತು ಬ್ಯಾಟರಿ ಉತ್ಪಾದನೆ ಉದ್ಯಮಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಲು ಸರ್ಕಾರವು ಆದೇಶ ಸಂಖ್ಯೆ: ಸಿಐ 117 ಎಸ್‌ಪಿಐ 2017, ದಿನಾಂಕ 25.09.2017 ರನ್ವಯ "Karnataka Electric Vehicle and Energy Storage Policy 2017"ನ್ನು ಘೋಷಿಸಿದೆ. ಸದರಿ ಪಾಲಿಸಿಯನ್ವಯ ವಿದ್ಯುತ್‌ಚಾಲಿತ ವಾಹನಗಳ ತಯಾರಿಕೆ, ಬ್ಯಾಟರಿ ಉತ್ಪಾದನೆ, ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ ಹಾಗೂ ಬ್ಯಾಟರಿ ಸ್ವಾಪಿಂಗ್ ಸ್ಟೇಷನ್‌ಗಳ ಸ್ಥಾಪನೆಗೆ ಉತ್ತೇಜನ ನೀಡಲು ಬಂಡವಾಳ ಹೂಡಿಕೆ ಸಹಾಯಧನ, ಸ್ಟ್ಯಾಂಪ್ ಶುಲ್ಕ ವಿನಾಯಿತಿ, ವಿದ್ಯುತ್ ತೆರಿಗೆ ವಿನಾಯಿತಿ, ಭೂ ಪರಿವರ್ತನೆ ಶುಲ್ಕ ಹಿಂಪಾವತಿ, ಇ.ಟಿ.ಪಿಗಳಿಗೆ ಸಹಾಯಧನ ಮತ್ತು ಬೃಹತ್ ಮತ್ತು ಮೆಗಾ ಕೈಗಾರಿಕೆಗಳಿಗೆ ನಿವ್ವಳ ಎಸ್.ಜಿ.ಎಸ್.ಟಿ ಪಾವತಿ ಮೇಲೆ ಬಡ್ಡಿರಹಿತ ಸಾಲ ಸೌಲಭ್ಯಗಳನ್ನು ನೀಡಲಾಗುವುದು.
ಆ	ರಾಜ್ಯದಲ್ಲಿ ಪ್ರಸ್ತುತ ಎಷ್ಟು ವಿದ್ಯುತ್ ಚಾಲಿತ ವಾಹನ ತಯಾರಿಕಾ ಕಂಪನಿಗಳು ಇವೆ; (ವಿವರ ನೀಡುವುದು)	ರಾಜ್ಯದಲ್ಲಿ ಪ್ರಸ್ತುತ ಕೆಳಕಂಡ 3 ವಿದ್ಯುತ್‌ಚಾಲಿತ ವಾಹನ ತಯಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ. 1. ಮಹೀಂದ್ರ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. 2. ಟಾಟಾ ಮೋಟರ್ಸ್ ಲಿಮಿಟೆಡ್, ಧಾರವಾಡ. 3. ಗೋ ಗ್ರೀನ್ ಇ.ಓ.ಟಿ ಪ್ರೈವೇಟ್ ಲಿಮಿಟೆಡ್, ಶ್ರೀನಿವಾಸಪುರ, ಕೋಲಾರ ಜಿಲ್ಲೆ.
ಇ	ಈ ಕಂಪನಿಗಳು ವರ್ಷಕ್ಕೆ ಎಷ್ಟು ವಿದ್ಯುತ್ ವಾಹನಗಳನ್ನು ಉತ್ಪಾದಿಸುತ್ತಿವೆ: ಅದರಲ್ಲಿ ದ್ವಿಚಕ್ರ ವಾಹನಗಳ ಸಂಖ್ಯೆ ಎಷ್ಟು; ನಾಲ್ಕು ಚಕ್ರ ವಾಹನಗಳ ಸಂಖ್ಯೆ ಎಷ್ಟು?	(see table below)

ಕ್ರ ಸಂ	ಘಟಕದ ಹೆಸರು	ಉತ್ಪನ್ನ	ವಾರ್ಷಿಕ ಉತ್ಪಾದನಾ ಸಾಮರ್ಥ್ಯ
1.	ಮಹೀಂದ್ರ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್, ಬೆಂಗಳೂರು	ಇ–ರಿಕ್ಷಾ (ತ್ರಿಚಕ್ರ ವಾಹನ)	15,000

		2.	ಟಾಟಾ ಮೋಟರ್ಸ್ ಲಿಮಿಟೆಡ್, ಧಾರವಾಡ	ಬಸ್	800
		3.	ಗೋ ಗ್ರೀನ್ ಇ.ಓ.ಟಿ ಪ್ರೈವೇಟ್ ಲಿಮಿಟೆಡ್, ಕೋಲಾರ	ಸ್ಕೂಟರ್ (ದ್ವಿಚಕ್ರ ವಾಹನ)	7,200

ಸಿಐ 122 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು